**ದಿಃ 21.09.2024 ರ ಮಧ್ಯಂತರ ಅರ್ಜಿಯ ಮೇಲಿನ ಆದೇಶದಂತೆ ಸಾಕಿಯನ್ನು ದಿನಾಂಕಃ 07.02.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀಮತಿ ಎಂ.ಆರ್ .ಸಿ ವಕೀಲರಿಂದಃ ವಾದಿಯ ಪರವಾಗಿಃ**

**10)** ದೇವಗಿರಿ ಗ್ರಾಮ ಪಂಚಾಯತಿ ಆಸ್ತಿ ನಂಬರಃ 47 ರ ದೃಢೀಕರಣ ಪತ್ರವನ್ನು ಗುರುತಿಸಿದ್ದು, ಅದನ್ನು ನಿ.ಪಿ-26 ಎಂದು ಗುರುತಿಸಲಾಯಿತು. ದಿನಾಂಕಃ 23.12.2019 ರ ವರದಿಯ ಅರ್ಜಿಯ ಪ್ರತಿಯನ್ನು ನಿ.ಪಿ-27 ಎಂದು, ದೇವಗಿರಿ ಗ್ರಾಮ ಪಂಚಾಯತಿಯ ದಿನಾಂಕಃ 31.12.2019 ರ ಸಾಮಾನ್ಯ ಸಭೆ 5 ರ ನಡವಳಿ ಪ್ರತಿಯನ್ನು ನಿ.ಪಿ-28 ಎಂದು, ಹಕ್ಕುಬದಲಾವಣೆ ವಹಿ 149 ರ ಪ್ರತಿಯನ್ನು ನಿ.ಪಿ-29 ಎಂದು, ಕಾಮಗಾರಿ ಬದಲಾವಣೆ ದಾಖಲೆಯನ್ನು ಹಾಜರುಪಡಿಸಿದ್ದು, ಅಕ್ಷರಗಳು ಸರಿಯಾಗಿ ಕಾಣದ ಕಾರಣ ಸ್ಪಷ್ಟವಾಗಿ ಕಾಣುವ ದಾಖಲೆಯನ್ನು ಹಾಜರುಪಡಿಸಲು ಸೂಚಿಸಿ ಮುಂದೂಡಲಾಯಿತು. ದಿನಾಂಕಃ 17.11.2019 ರ ಒಪ್ಪಿಗೆಯ ಪತ್ರದ ಪ್ರತಿಯನ್ನು ನಿ.ಪಿ-30 ಎಂದು, ದಿನಾಂಕಃ 24.12.2019 ರ ಸಾಮಾನ್ಯ ರಶೀದಿಯನ್ನು ನಿ.ಪಿ-31 ಎಂದು ಗುರುತಿಸಲಾಯಿತು. ದಿನಾಂಕಃ 30.12.2019 ರ ಹಕ್ಕುಬಿಟ್ಟುಕೊಟ್ಟ ಪತ್ರದ ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಪತ್ರವನ್ನು ರೂ.50/- ಮುಖಬೆಲೆಯ ಸ್ಟಾಂಪ ಪೇಪರ ಮೇಲೆ ಬರೆಯಲಾಗಿರುತ್ತದೆ. ಸದರಿ ದಾಖಲೆಯು ಪಂಚಾಯತಿಯಿಂದ ನೀಡಿದ ದೃಢೀಕೃತ ದಾಖಲೆಯಾಗಿರುತ್ತದೆ. ಮುದ್ರಾಂಕ ಶುಲ್ಕದ ಮೇಲೆ ವಾದವನ್ನು ಆಲಿಸಲು ಮುಂದೂಡಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.